# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಪ್ರಶ್ನೆ ಸಂಖ್ಯೆ | : | 961 |
| ವಿಷಯ | : | ಸೌರಶಕ್ತಿ ಯೋಜನೆ |
| ಉತ್ತರಿಸಬೇಕಾದ ಸದಸ್ಯರು | : | ಮಾನ್ಯ ಇಂಧನ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15.12.2025 |

****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ EV ಚಾರ್ಜಿಂಗ್ ಕೇಂದ್ರುಗಳನ್ನು ಸ್ಥಾಪಿಸಲು ಕಳೆದ ವರ್ಷದ ಬಜೆಟ್ ನಲ್ಲಿ ಘೋಷಣೆಯಾಗಿದ್ದು. ಈವರೆಗೂ ರಾಜ್ಯದಲ್ಲಿ ಎಷ್ಟು EV ಚಾರ್ಜಿಂಗ್ ಕೇಂದ್ರುಗಳನ್ನು ಯಾವ ಯಾವ ಜಾಗದಲ್ಲಿ ಸ್ಥಾಪಿಸಲಾಗಿದೆ ಮತ್ತು ಇದಕ್ಕೆ ಬಜೆಟ್ ನಲ್ಲಿ ನೀಡಲಾದ ಮೊತ್ತ ಎಷ್ಟು; | ರಾಜ್ಯದಲ್ಲಿ EV Charging ಕೇಂದ್ರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು ಎಂದು 2024-25 ನೇ ಆಯವ್ಯಯದಲ್ಲಿ ಘೋಷಿಸಲಾಗಿತ್ತು. EV ಪಾಲುದಾರರಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಾರದ ಕಾರಣ, ಸರ್ಕಾರದಿಂದ ಸದರಿ 2024-25ರ ಬಜೆಟ್ ಘೋಷಣೆಯನ್ನು ಕೈಬಿಡಲಾಗಿದೆ. |
| ಆ) | ರಾಜ್ಯದಲ್ಲಿ ಸ್ಥಾಪಿಸಿದ EV ಚಾರ್ಜಿಂಗ್ ಕೇಂದ್ರುಗಳ ನಿರ್ವಹಣೆ, ದುರಸ್ತಿ ಮತ್ತು ಕಾರ್ಯಕ್ಷಮತೆ ಪರಿಶೀಲನೆಗಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಮತ್ತು ಪ್ರತಿಯೊಂದು ಚಾರ್ಜಿಂಗ್ ಕೇಂದ್ರುದ ಕಾರ್ಯಕ್ಷಮತೆ ಕುರಿತು ವರದಿ ತಯಾರಿಸಲಾಗಿದೆಯೇ | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿ ಮುಖಾಂತರ ಸ್ಥಾಪಿಸಲಾದ EV ಚಾರ್ಜಿಂಗ್ ಕೇಂದ್ರಗಳ ನಿರ್ವಹಣೆಗಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿದೆ:<br>• BESCOM EV MITHRA ಮೊಬೈಲ್ ಅಪ್ಲಿಕೇಶನ್ ಅನ್ನು ಅಳವಡಿಸಲಾಗಿರುತ್ತದೆ. ಈ ಮೊಬೈಲ್ ಆಪ್ ಬಳಸಿಕೊಂಡು EV ಬಳಕೆದಾರರು ತಮ್ಮ ವಿದ್ಯುತ್ ವಾಹನಗಳನ್ನು ಚಾರ್ಜ ಮಾಡಬಹುದಾಗಿರುತ್ತದೆ ಹಾಗೂ ಚಾರ್ಜರ್ ಗೆ ಸಂಬಂಧಪಟ್ಟ ದೂರುಗಳನ್ನು ಸದರಿ ಮೊಬೈಲ್ ಆಪ್ ಮುಖಾಂತರ ಸಲ್ಲಿಸ ಬಹುದಾಗಿರುತ್ತದೆ.<br>• EV ಗುತ್ತಿಗೆದಾರರೊಂದಿಗೆ BESCOM ವಾರ್ಷಿಕ ನಿರ್ವಹಣಾ ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ಅದರಂತೆ, EV ಗುತ್ತಿಗೆದಾರರು EV ಚಾರ್ಜರ್ ಗಳ ನಿರ್ವಹಣೆ ಕಾರ್ಯವನ್ನು ನಿರ್ವಹಿಸುತ್ತಾರೆ.<br>• ಪ್ರತಿಯೊಂದು ಚಾರ್ಜಿಂಗ್ ಕೇಂದ್ರುದ ಕಾರ್ಯಕ್ಷಮತೆ EV CMS ಅಪ್ಲಿಕೇಶನ್ ನಲ್ಲಿ ದಾಖಲಾಗಿರುತ್ತದೆ. |
| ಇ) | ನಗರ ಪ್ರದೇಶಗಳ ಜೊತೆಗೆ ಗ್ರಾಮೀಣ ಹಾಗೂ ರಾಜ್ಯ ಹೆದ್ದಾರಿ/ರಾಷ್ಟ್ರೀಯ ಹೆದ್ದಾರಿ ಮಾರ್ಗಗಳಲ್ಲಿ EV ಚಾರ್ಜಿಂಗ್ ಕೇಂದ್ರುಗಳನ್ನು ಸ್ಥಾಪಿಸಲು ಕುರಿತು ಸರ್ಕಾರ ಯಾವುದಾದರೂ ಯೋಜನೆ, ಹಂತವಾರು ಗುರಿಗಳು ಮತ್ತು ವೇಳಾಪಟ್ಟಿ ನಿಗದಿಪಡಿಸಿದೆಯೇ; ಇದ್ದದಲ್ಲಿ. ವಿವರ ನೀಡುವುದು; | • ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ಸ್ವಂತ ಬಂಡವಾಳದಿಂದ ಒಟ್ಟು 283 ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.<br>• ಇತರೆ ಸರ್ಕಾರಿ ಇಲಾಖೆಗಳು ಮತ್ತು ಖಾಸಗಿಯವರು ಅನುಷ್ಠಾನಗೊಳಿಸಿರುವ ಇವಿ ಚಾರ್ಜಿಂಗ್ ಕೇಂದ್ರಗಳೂ ಸೇರಿ ಒಟ್ಟಾರೆಯಾಗಿ 5963 ಚಾರ್ಜಿಂಗ್ ಕೇಂದ್ರಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇವಿ ಚಾರ್ಜಿಂಗ್ ಕೇಂದ್ರಗಳ ಅನುಷ್ಠಾನದಲ್ಲಿ ರಾಜ್ಯವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. |

| | | |
|---|---|---|
| | | • ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ (PPP) ರಾಜ್ಯದಲ್ಲಿ ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು 31 ಜಿಲ್ಲೆಗಳಿಗೆ ಬೆವಿಕಂ ವತಿಯಿಂದ ಕರೆಯಲಾಗಿದ್ದ ಟೆಂಡರ್‌ನಲ್ಲಿ 9 ಜಿಲ್ಲೆಗಳಲ್ಲಿ 585 ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕಾರ್ಯದೇಶಗಳನ್ನು ಖಾಸಗಿ ಏಜೆನ್ಸಿಗಳು/ಕಂಪನಿಗಳಿಗೆ ನೀಡಲಾಗಿದ್ದು, ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಉಳಿದ ಜಿಲ್ಲೆಗಳಿಗೆ ಟೆಂಡರ್‌ಗಳನ್ನು ಮರು ಆಹ್ವಾನಿಸಬೇಕಿದೆ.<br>• ಮುಂದುವರೆದು. ಇನ್ನು ಹೆಚ್ಚು EV ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಕೆಳಗಿನ ಕ್ರಮ ಕೈಗೊಳ್ಳಲಾಗಿದೆ:<br>  ○ ಸಾರಿಗೆ ಇಲಾಖೆಯ 11 ಸ್ಥಳಗಳಲ್ಲಿ 22 ಸಂಖ್ಯೆಯ ಚಾರ್ಜರ್‌ಗಳನ್ನು ಅಳವಡಿಸಲು ಕಾಮಗಾರಿ ಪ್ರಗತಿಯಲ್ಲಿದೆ.<br>  ○ ರಾಷ್ಟ್ರೀಯ ಹೆದ್ದಾರಿ-48 ರ ಟೋಲ್ ಪ್ಲಾಜಗಳಲ್ಲಿ 20 ಸಂಖ್ಯೆಯ ಚಾರ್ಜಿಂಗ್ ಕೇಂದ್ರಗಳನ್ನು ಅಳವಡಿಸಲು NHAI ಪ್ರಾಂತೀಯ ಕಛೇರಿಗೆ ಪತ್ರ ಕಳುಹಿಸಲಾಗಿದೆ. ಜಂಟಿ ಸ್ಥಳ ತಪಾಸಣೆ ನಡೆಸಿ, ವರದಿಯನ್ನು NHAI ಗೆ ಕಳುಹಿಸಲಾಗಿದ್ದು, ಅನುಮೋದನೆ ನಿರೀಕ್ಷಣೆಯಲ್ಲಿದೆ.<br>  ○ ರಾಜ್ಯ ಹೆದ್ದಾರಿಗಳಲ್ಲಿ 30 ಸಂಖ್ಯೆಯ ಚಾರ್ಜಿಂಗ್ ಕೇಂದ್ರಗಳನ್ನು ಅಳವಡಿಸಲು ಸರ್ವೇ ಕಾರ್ಯ ಮುಗಿದಿದ್ದು, ಪ್ರಸ್ತಾವನೆಯನ್ನು ಸಿದ್ಧಪಡಿಸಿ KRDCL ಇವರಿಗೆ ಸಲ್ಲಿಸಲಾಗಿದೆ. KRDCL ಇವರ ಅನುಮೋದನೆ ನಿರೀಕ್ಷಣೆಯಲ್ಲಿದೆ.<br>• ಭಾರತ ಸರ್ಕಾರದ ಭಾರೀ ಕೈಗಾರಿಕೆಗಳ ಸಚಿವಾಲಯ (MHI) 26 ಸೆಪ್ಟೆಂಬರ್ 2025 ರಂದು ಪಿಎಂ ಇ-ಡ್ರೈವ್ ಯೋಜನೆಯಡಿಯಲ್ಲಿ ಇವಿ ಪಬ್ಲಿಕ್ ಚಾರ್ಜಿಂಗ್ ಸ್ಟೇಷನ್‌ಗಳ (EV PCS) ನಿಯೋಜನೆಗಾಗಿ ಕಾರ್ಯಾಚರಣಾ ಮಾರ್ಗಸೂಚಿಗಳನ್ನು ಹೊರಡಿಸಿದೆ. ಪಿಎಂ ಇ-ಡ್ರೈವ್ ಯೋಜನೆಯಡಿಯಲ್ಲಿ, ಬೆಸ್ಕಾಂ ವ್ಯಾಪ್ತಿಯ ಹೈವೇಗಳಲ್ಲಿ 250 ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವುದಾಗಿ ಯೋಜಿಸಿರುವುದು, ಇದರಲ್ಲಿ 200 ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ವಂತ ಬಂಡವಾಳದಲ್ಲಿ ಸ್ಥಾಪಿಸುವ ಯೋಜನೆ ಇದೆ. ಈ ಸಂಬಂಧ ಪ್ರಸ್ತಾವನೆ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿದ್ದು, MHIನಿಂದ ಅನುಮೋದನೆ ನಿರೀಕ್ಷಣೆಯಲ್ಲಿದೆ. |
| ಈ) | EV ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ಯಾವುದೇ ಖಾಸಗಿ ಕಂಪನಿಗಳು/ಏಜೆನ್ಸಿಗಳನ್ನು ಸೇರಿಸಿಕೊಂಡಿದೆಯೇ; ಇದ್ದರೆ, ಆಯ್ಕೆ ಪ್ರಕ್ರಿಯೆ ಒಪ್ಪಂದಾವಧಿ ಮತ್ತು ಸರ್ಕಾರಿ ಮೇಲ್ವಿಚಾರಣೆ ಕುರಿತು ವಿವರ ನೀಡುವುದು? | • ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ (PPP) ರಾಜ್ಯದಲ್ಲಿ ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು 31 ಜಿಲ್ಲೆಗಳಿಗೆ ಬೆವಿಕಂ ವತಿಯಿಂದ ಕರೆಯಲಾಗಿದ್ದ ಟೆಂಡರ್‌ನಲ್ಲಿ 9 ಜಿಲ್ಲೆಗಳಲ್ಲಿ ಮಾತ್ರ ಬಿಡ್‌ಗಳು ಸ್ವೀಕೃತವಾಗಿದ್ದವು (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಬೆಳಗಾವಿ ಮತ್ತು ಹಾವೇರಿ). ಈ 9 ಜಿಲ್ಲೆಗಳಲ್ಲಿ 585 ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕಾರ್ಯದೇಶಗಳನ್ನು ಖಾಸಗಿ ಏಜೆನ್ಸಿಗಳು/ಕಂಪನಿಗಳಿಗೆ ನೀಡಲಾಗಿದ್ದು, ಇವಿ |

| | | |
|---|---|---|
| | | ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br>• ಸ್ಟೇಷನ್‌ಗಳನ್ನು ಸ್ಥಾಪಿಸಲು ಕಾರ್ಯದೇಶಗಳನ್ನು ಖಾಸಗಿ ಏಜೆನ್ಸಿಗಳು/ಕಂಪನಿಗಳಿಗೆ ದಿನಾಂಕ: 10.10.2023 ರಂದು ನೀಡಲಾಗಿದ್ದು, ಎಲ್ಲಾ ಸಂಸ್ಥೆಗಳು 12 ತಿಂಗಳೊಳಗೆ EV ಚಾರ್ಜಿಂಗ್ ಸ್ಟೇಷನ್‌ಗಳ ಕಾರ್ಯಾರಂಭವನ್ನು (Commissioning) ಪೂರ್ಣಗೊಳಿಸಬೇಕಾಗಿತ್ತು.<br>• ಆದರೆ, ಗುತ್ತಿಗೆ ಪಡೆದ ಸಂಸ್ಥೆಗಳು EV ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಪರಿಗಣಿಸಿ, EV ಚಾರ್ಜಿಂಗ್ ಕೇಂದ್ರಗಳನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು 31.03.2026 ರವರೆಗೆ ವಿಸ್ತರಿಸಲಾಗಿದೆ. |

**ಸಂಖ್ಯೆ:ಎನರ್ಜಿ 304 ಇಬಿಎಸ್ 2025**

(ಕೆ.ಜೆ. ಜಾರ್ಜ್)
ಇಂಧನ ಸಚಿವರು